ಕೊಂಡಿದೆ' ಎಂದು ಈ ಆತ್ಮತತ್ತ್ವವನ್ನು ಕುರಿತಾಗಿ ಶ್ರೀಕೃಷ್ಣನು ಹೇಳುತ್ತಾನೆ. ಈ ಮಾತಿನ ಅರ್ಥವನ್ನು ವಿವರಿಸುತ್ತ ಶ್ರೀಧರಸ್ವಾಮಿಗಳು ಹೇಳುತ್ತಾರೆ: 'ಸಕಲ ಪ್ರಾಣಿಗಳ ಕೈಕಾಲು ಮುಂತಾದ ಉಪಾಧಿಗಳ ಮೂಲಕ ಎಲ್ಲ ಕಾರ್ಯಚಟುವಟಿಕೆಗಳಿಗೂ ಆಧಾರವಾಗಿದೆ ಎಂದರ್ಥ.' ಶ್ರೀರಾಮಕೃಷ್ಣರು ಇದನ್ನು ಸುಂದರ ಉದಾಹರಣೆಯ ಮೂಲಕ ವಿವರಿಸುತ್ತಾರೆ: ಸಿಂಹ, ಹುಲಿ, ಕುದುರೆ ಮುಂತಾದ ಮುಖಾಕೃತಿಗಳ ಮೂಲಕ ಭಾವಣಿಯ ನೀರು ಬರುವಂತೆ ಮಾಡಿರುತ್ತಾರೆ. ಆದರೆ ಸಿಂಹವಾಗಲಿ ಹುಲಿಯಾಗಲಿ ನೀರು ಸುರಿಸುತ್ತಿಲ್ಲ. ಚಿಕ್ಕ ಮಕ್ಕಳು ಸಿಂಹ ಮೊದಲಾದವು ನೀರು ಉಗುಳುತ್ತಿವೆ ಎಂದು ಮಾತನಾಡಿಕೊಳ್ಳುತ್ತಾರೆ. ನಿಜವಾಗಿಯೂ ನೀರು ಮೋಡಕ್ಕೆ ಸೇರಿದ್ದು. ಹಾಗೆಯೇ ಎಲ್ಲ ಜೀವಿಗಳ ಮೂಲಕ ಕ್ರಿಯಾರೂಪದಲ್ಲಿ ವ್ಯಕ್ತವಾಗುತ್ತಿರುವುದು ಈ ಚೈತನ್ಯಶಕ್ತಿಯೇ. ಆದರೂ ಆತ್ಮನು ನಿಷ್ಕ್ರಿಯ. ವಿದ್ಯುಚ್ಛಕ್ತಿಯ ಮೂಲಕ ಒಂದು ಯಂತ್ರ ಕೆಲಸ ಮಾಡುತ್ತದೆ. ಆದರೆ ಯಂತ್ರ ಮಾಡುವ ಕೆಲಸಕ್ಕೂ ವಿದ್ಯುಚ್ಛಕ್ತಿಗೂ ಯಾವ ಸಂಬಂಧವೂ ಇಲ್ಲ. ಯಂತ್ರದ ಗುಣದೋಷಗಳನ್ನು ಯಾರೂ ವಿದ್ಯುಚ್ಛಕ್ತಿಗೆ ಆರೋಪಿಸುವುದಿಲ್ಲ. ಈ ವಿಷಯವನ್ನೇ **ಸರ್ವೇಂದ್ರಿಯ-ಗುಣಾಭಾಸಂ ಸರ್ವೇಂದ್ರಿಯ ವಿವರ್ಜಿತಂ** ಎಂಬ ಮಾತಿನ ಮೂಲಕ ಶ್ರೀಕೃಷ್ಣನು ವಿವರಿಸಿದ್ದಾನೆ.

ಆತ್ಮನು ಕೇವಲ 'ಉಪದ್ರಷ್ಟಾ' – ಕೇವಲ ಸಾಕ್ಷಿಯಂತೆ ನೋಡುವವನು ಅಷ್ಟೇ. ಇಲ್ಲಿ 'ನೋಡುವವನು' ಎಂಬ ಕ್ರಿಯಾಪದವನ್ನು ಉಪಯೋಗಿಸಿದ್ದರೂ (ಭಾಷೆಯ ಮಿತಿಯಿಂದ) ನೋಡುವುದು ಒಂದು ಕ್ರಿಯೆ ಅಲ್ಲ. ಶ್ರೀಧರಸ್ವಾಮಿಗಳು ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಾರೆ: ಋತ್ವಿಕ್, ಯಜಮಾನ ಮೊದಲಾದವರು ಯಜ್ಞ ಮಾಡುತ್ತಿರುವಾಗ ತಟಸ್ಥನಾಗಿರುವ ಇನ್ನೊಬ್ಬನು ಅವರೆಲ್ಲರ ಗುಣ ದೋಷಗಳನ್ನೂ ನೋಡುತ್ತಿರುತ್ತಾನೆ – ಕೇವಲ ಸಾಕ್ಷಿ ಅಷ್ಟೇ, ಯಜ್ಞಕ್ರಿಯೆಗೂ ಯಜ್ಞಫಲಕ್ಕೂ ಮತ್ತು ಅವನಿಗೂ ಯಾವ ಸಂಬಂಧವೂ ಇಲ್ಲ. ಆತ್ಮನು ಕೇವಲ ಅನುಮೋದಿಸುತ್ತಾನೆ (ಅನುಮಂತ) – ಒಳಿತಾಗಲಿ, ಕೆಡುಕಾಗಲಿ. ಸ್ವಾಮಿ ಯತೀಶ್ವರಾನಂದರು ಈ ವಿಷಯವನ್ನು ಹೀಗೆ ವಿವರಿಸುತ್ತಾರೆ:

'ಈ ಜಗತ್ತಿನ ತಂದೆ ಅಥವಾ ಜಗನ್ಮಾತೆ ಸಾಕ್ಷಿಯಾಗಿ ತಮ್ಮ ಮಕ್ಕಳು ಈ ಜಗತ್ತಿನಲ್ಲಿ ಆಟವಾಡುತ್ತಿರುವುದನ್ನೇ ನೋಡುತ್ತಿದ್ದಾರೆ. ಮಗು ಈ ಬೊಂಬೆಯಾಟದಿಂದ, ಈ ಬಾಲಿಶ ಕ್ರಿಯೆಯಿಂದ ಬೇಸತ್ತಾಗ ಭಗವಂತನು ಅವರೆಡೆಗೆ ಬರುತ್ತಾನೆ, ಮತ್ತು ಈ ಮಿಥ್ಯಾಕ್ರೀಡಾಂಗಣದಿಂದ ಅದನ್ನು ಬೇರೆಡೆಗೆ ಕರೆದುಕೊಂಡು ಹೋಗುತ್ತಾನೆ. ಮಕ್ಕಳು ಬೊಂಬೆಯಾಟ ಆಡುವರು, ಮನೆ ಆಟ ಆಡುವರು, ಬಸ್ಸಿನ ಆಟ ಆಡುವರು – ಹೀಗೆ ಅನೇಕ ಆಟ ತಿಂಡಿಗಳಲ್ಲಿ ಮಗ್ನರಾಗಿರುವರು. ಅವರು ಅದರಿಂದ ಬೇಸತ್ತು ತಿರಸ್ಕಾರದಿಂದ ಅದರ ವಿಷಯಕ್ಕೆ ವಿಮುಖರಾಗುವವರೆಗೆ ದೇವರು ಏನೂ ಮಾಡಲಾರ. ದೇವರಿಗೆ ಇದೊಂದು ಮೋಜು. ಒಂದು ದಿನ ಮಗುವಿಗೆ ಸ್ವಲ್ಪ ಬುದ್ಧಿ ಬಂದಮೇಲೆ ಚಿಂತಿಸತೊಡಗುತ್ತದೆ, 'ಏನು ಮಾಡಿದೆ ಈ ಜೀವನದಲ್ಲಿ?' ಎಂದು. ಆಗ ಭಗವಂತನು ಅದಕ್ಕೆ ಧ್ವನಿಗೂಡಿಸಿ, 'ಹೌದು, ನೀನೇನು ಮಾಡಿದೆ, ಮಗು? ನಿನಗಾರು ಇದನ್ನು ಮಾಡಲು ಹೇಳಿದರು? ಮೂರ್ಖನಂತೆ ಕೊನೆ ಮೊದಲಿಲ್ಲದೆ ಈ ಆಟದಲ್ಲಿ ಮಗ್ನವಾಗಿರಲು ಯಾರು ಹೇಳಿದರು ನಿನಗೆ? ಈ ಬೊಂಬೆಗಳ ಮೋಹಜಾಲದಲ್ಲಿ ಸಿಲುಕಿಕೊಳ್ಳಲು ನಿನಗೆ ಯಾರು ಹೇಳಿದರು?' ಆದರೆ ಎಷ್ಟೋ ಬಾರಿ ಆಗಲೆ ಸಮಯ ಮೀರಿ ಹೋಗಿರುತ್ತದೆ, ಮಗು ತನ್ನ ಜರ್ಜರಿತ ಜೀವನದ ಮುರುಕು ಮನೆಯ ಮುಂದೆ ಕುಳಿತು ಪರಿತಪಿಸುತ್ತದೆ. *('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ', ಪು.೭)*

ಆತ್ಮನು ಕೇವಲ ಸಾಕ್ಷಿಯಾಗಿರುವುದರಿಂದ ಕರ್ಮವಾಗಲಿ ಕರ್ಮಫಲವಾಗಲಿ ಅವನಿಗೆ ಅಂಟುವುದಿಲ್ಲ. ಆದ್ದರಿಂದ ನಮ್ಮನ್ನು ಆತ್ಮದೊಡನೆ ಒಂದಾಗಿಸಿಕೊಂಡು, ಎಲ್ಲ ಕ್ರಿಯೆಗಳಲ್ಲಿ ಭಾಗವಹಿಸಿಯೂ, ನಾವು ನಿರ್ಲಿಪ್ತರಾಗಿರಬೇಕು ಎಂಬುದು ಶ್ರೀಕೃಷ್ಣನ ಅಭಿಪ್ರಾಯ **(ನ ಕರೋತಿ ನ ಲಿಪ್ಯತೇ)**. ಆಸಕ್ತಿ ಎಂಬ ಮೇಣ ಮನಸ್ಸಿನಲ್ಲಿ ಇಲ್ಲದಿದ್ದರೆ ಕರ್ಮಫಲ ಅಂಟುವುದಿಲ್ಲ. ಕಂಪ್ಯೂಟರ್‌ನಲ್ಲಿ ಕೆಲಸ ಮಾಡುತ್ತಿರುವಾಗ ಆಗಾಗ ಸೇವ್ ಮಾಡುತ್ತಿರಬೇಕು. ಇಲ್ಲದಿದ್ದರೆ ವಿದ್ಯುತ್ ನಿಂತುಹೋದಾಗ ಅಥವಾ ಕಂಪ್ಯೂಟರ್ ಆರಿಸಿದಾಗ ಟೈಪ್ ಮಾಡಿರುವುದೆಲ್ಲ ಹೊರಟುಹೋಗುತ್ತದೆ. ಆದರೆ ಇಲ್ಲಿ ಎಲ್ಲ ಕೆಲಸ ಮಾಡಬೇಕು, ಆದರೆ 'ಸೇವ್' ಮಾಡಬಾರದು.

ಶ್ರೀರಾಮಕೃಷ್ಣರು ಹೇಳುವಂತೆ ನಾವು ಒಣಗಿದ ತೆಂಗಿನ ಕಾಯಿಯಂತೆ ಇರಬೇಕು. ಹಸಿ ತೆಂಗಿನಕಾಯಿಯಲ್ಲಿ ನೀರಿರುತ್ತದೆ ಮತ್ತು ತಿರುಳು ಕರಟದೊಂದಿಗೆ ಅಂಟಿಕೊಂಡಿರುತ್ತದೆ. ಒಣಗಿರುವುದರಲ್ಲಿ ನೀರೂ ಇರುವುದಿಲ್ಲ, ಹಾಗೂ ತಿರುಳು ಕರಟದಿಂದ ಬೇರೆಯಾಗಿರುತ್ತದೆ – ಅಲುಗಾಡಿಸಿದರೆ ಶಬ್ದ ಕೇಳಿಸುತ್ತದೆ. ಹೀಗೆಯೇ ನಮ್ಮ ಮನಸ್ಸಿನಲ್ಲಿರುವ ಸಂಸ್ಕಾರಗಳ ನೀರು ತಪಸ್ಸಿನ ಶಾಖದಿಂದ ಬತ್ತಿಹೋಗಬೇಕು, ಹಾಗೂ ಆತ್ಮನು ಉಪಾಧಿಗಳಿಂದ ಪ್ರತ್ಯೇಕವಾಗಬೇಕು – ಕ್ಷೇತ್ರಜ್ಞನನ್ನು ಕ್ಷೇತ್ರದಿಂದ ಬೇರ್ಪಡಿಸಬೇಕು. ಶ್ರೀಕೃಷ್ಣನು ಕೊನೆಯ ಶ್ಲೋಕದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾನೆ: 'ಹೀಗೆ ಕ್ಷೇತ್ರ ಮತ್ತು ಕ್ಷೇತ್ರಜ್ಞರ ಭೇದವನ್ನು ಜ್ಞಾನಚಕ್ಷುವಿನ ಮೂಲಕ ಯಾರು ತಿಳಿದುಕೊಳ್ಳುತ್ತಾರೋ ಅವರು ಬ್ರಹ್ಮವನ್ನು ಹೊಂದುತ್ತಾರೆ.'

ಈ ಅಧ್ಯಾಯದಲ್ಲಿ ಹೇಳಿರುವ ಮುಖ್ಯಾಂಶಗಳು: ಕ್ಷೇತ್ರವೆಂದರೆ ಯಾವುದು, ಅದರ ಸ್ವರೂಪವೇನು, ಕ್ಷೇತ್ರಜ್ಞ ಯಾರು, ಅವನ ಸ್ವರೂಪವೆಂತಹುದು, ಇವರಿಬ್ಬರನ್ನೂ ಪ್ರತ್ಯೇಕಿಸಿ ಅರಿಯುವ ವಿಧಾನ, ಇದಕ್ಕೆ ಬೇಕಾದ ಸಾಧನೆಗಳು ಮತ್ತು ಈ ವಿವೇಕದಿಂದ ಆಗುವ ಪ್ರಯೋಜನ. ✷